# ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ

ಸಿಸಿ ನಂ. 388/18

| | | |
|---|---|---|
| ಸಾಕ್ಷಿಯ ಹೆಸರು | ಹರೀಶ್ .ಸಿ. | ಪಿ.ಡಬ್ಲ್ಯು-3 |
| ತಂದೆಯ ಹೆಸರು | ಲೇಟ್ ಚನ್ನಶೆಟ್ಟಿ | ಸಿ.ಡಬ್ಲ್ಯು-3 |
| ವಯಸ್ಸು | **44** ವರ್ಷ | |
| ಉದ್ಯೋಗ | ಅಬಕಾರಿ ಉಪ ನಿರೀಕ್ಷಕರು , ಹಾಸನ ವಲಯ. | ದಿನಾಂಕಃ 20-10-2023. |
| ವಾಸ | ಹಾಸನ | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಎಪಿಪಿ ರವರಿಂದ

ನಾನು 2011 ರಿಂದ 2021 ರವರೆಗೆ ಹಾಸನ ವಲಯ-2 ರಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24-04-2018 ರಂದು ಸಂಜೆ 5-30 ರ ಸಮಯದಲ್ಲಿ ವಿಧಾನಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಆಲೂರು ತಾಲ್ಲೋಕು, ಕೆ.ಹೊಸಕೋಟೆ ಹೋಬಳಿ , ಕಾಡ್ಲೂರು ಕೂಡಿಗೆ ಗ್ರಾಮದಲ್ಲಿ ಅಬಕಾರಿ ನಿರೀಕ್ಷಕರಾದ ಚಾಸಾ-2,4, 7 ರವರೊಂದಿಗೆ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ಅಬಕಾರಿ ನಿರೀಕ್ಷಕರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಸದರಿ ಗ್ರಾಮದಲ್ಲಿದ್ದ ಚಾಸಾ-1 ಮತ್ತು 2 ರವರನ್ನು ಪಂಚರನ್ನಾಗಿ ನಿಯೋಜಿಸಿಕೊಂಡು ಕಾಡ್ಲೂರು ಕೂಡಿಗೆಯಿಂದ ಹೈದೂರು ಗ್ರಾಮದ ಕಡೆ ರಸ್ತೆಯಲ್ಲಿರುವ ಸರ್ಕಾರಿ ಮೋರಿಯ ಹತ್ತಿರ ತೆರಳಿದಾಗ ಒಬ್ಬ ಆಸಾಮಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ಹಿಡಿದುಕೊಂಡು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಲು ಯತ್ನಿಸಿದಾಗ ಆತನನ್ನು ಸುತ್ತುವರಿದು ಹಿಡಿದು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಕಂಡುಬಂದಿದ್ದು , ಅವುಗಳನ್ನು ಎಣಿಕೆ ಮಾಡಿ ನೋಡಲಾಗಿ 90 ಎಂ ಎಲ್ ನ 27 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂಬ ಹೆಸರಿನ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಇದ್ದು , ಇವುಗಳನ್ನು ಹೊಂದಲು ಪರವಾನಿಗೆಯನ್ನು ಕೇಳಲಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದ ಕಾರಣ ಇದು ಶಿಕ್ಷಾರ್ಹ ಅಪರಾಧವೆಂದು ಆಸಾಮಿಗೆ ತಿಳಿಸಿ ಮದ್ಯವನ್ನು ವಶಕ್ಕೆ ಪಡೆದು , ಆತನನ್ನು ದಸ್ತಗಿರಿ ಮಾಡಿ , ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಸಂತೋಷ್ ಬಿನ್ ಅಚ್ಚಣ್ಣಶೆಟ್ಟಿ ಅಲಿಯಾಸ್ ಚಂದ್ರಶೇಖರ್ , 27 ವರ್ಷ , ಬಂಡ್ಸ್ ಜನಾಂಗ ,

ಕಾಡ್ಲೂರು ಕೂಡಿಗೆ ಗ್ರಾಮ , ಕೆ.ಹೊಸಕೋಟೆ ಹೋಬಳಿ , ಆಲೂರು ತಾಲ್ಲೋಕು ಎಂದು ತಿಳಿಸಿರುತ್ತಾನೆ. ದೊರೆತ ಮದ್ಯವನ್ನು ಅದೇ ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ದಾರ ಕಟ್ಟಿ ಇಲಾಖಾ ಸೀಲ್ ನಂ. 339 ರಿಂದ ಹರಗನ್ನು ಹಾಕಿ ಸೀಲ್ ಮಾಡಲಾಯಿತು. ಮತ್ತು ಮಾದರಿ ಸೀಲಿನ ನಕಲು ಮತ್ತು ಚೀಟಿಗಳನ್ನು ತಯಾರಿಸಿ ಅವುಗಳಿಗೆ ಪಂಚರ ಸಹಿಗಳನ್ನು ಪಡೆದು ಮಾದರಿ ತೆಗೆದ ಪ್ಯಾಕೆಟ್ ಗಳ ಮೇಲೆ ಚೀಟಿ ಅಂಟಿಸಲಾಯಿತು. ಸ್ಥಳದಲ್ಲಿ ಮಹಜರ್ ಕ್ರಮವನ್ನು ಸಂಜೆ 5-45 ರಿಂದ 6-30 ರವರೆಗೆ ಜರುಗಿಸಿದ್ದು , ಮಹಜರಿಗೆ ನಾವುಗಳು ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಸಾಕ್ಷಿಗೆ ಸ್ಥಳಮಹಜರ್ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸದರಿ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು , ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ. ದಿಃ12-06-2018 ರಂದು ಪ್ರಕರಣದಲ್ಲಿ ತೆಗೆಯಲಾದ ಮಾದರಿಯನ್ನು ರಾಸಾಯನಿಕ ವಿಶ್ಲೇಷಣೆಗಾಗಿ ತೆಗೆದುಕೊಂಡು ಹೋಗಿ ದಿಃ24-06-2018 ರಂದು ವರದಿ ಹಾಗೂ ಮುದ್ದೆಮಾಲುಗಳೊಂದಿಗೆ ಚಾಸಾ-7 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ಎಫ್ ಎಸ್ ಎಲ್ ಗೆ ಕಳುಹಿಸಿದಂತಹ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 27 ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಒಟ್ಟಾಗಿ ಮು ಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ಗೈರುಹಾಜರಿದ್ದು , ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.